


ಅತ್ಯಾಚಾರಕ್ಕೊಳಗಾಗಿಯೋ, ಕೌಟುಂಬಿಕ ದೌರ್ಜನ್ಯಕ್ಕೆ ತುತ್ತಾಗಿಯೋ ಗರ್ಭ ಧರಿಸಿದ್ದರೂ ಭ್ರೂಣವನ್ನು ಸಂಪೂರ್ಣ ಅವಧಿಯವರೆಗೆ ಹೊತ್ತು ಮಗುವನ್ನು ಹೆರಲೇಬೇಕು. ಒಂದು ಬಟಾಣಿಯ ಗಾತ್ರದಷ್ಟೇ ಚಿಕ್ಕದಿರುವ, ಅವಳ ಗರ್ಭದಲ್ಲಿ ಬೆಳೆಯುತ್ತಲೇ ಆಕೆಯ ಮೈ ಮನಸ್ಸನ್ನು ಆವರಿಸಿಕೊಳ್ಳಲಿರುವ, ಮೊದಲ ಹದಿನೆಂಟು ವರ್ಷಗಳಾದರೂ ಆಕೆಯ ಮೇಲೆ ಅವಲಂಬಿಸಿ ಅವಳ ಭವಿಷ್ಯತ್ತನ್ನು ನಿರ್ಧರಿಸಲಿರುವ ಈ ಭ್ರೂಣದ ಕುರಿತ ತೀರ್ಮಾನಗಳನ್ನು ಆಕೆ ತೆಗೆದುಕೊಳ್ಳುವಂತಿಲ್ಲ. ಆ ನಿರ್ಣಯಗಳೇನಿದ್ದರೂ ಆಯಾ ರಾಜ್ಯಗಳ ಆಡಳಿತಕ್ಕೆ ಸೇರಿದ್ದು. ಇದು ಅಮೆರಿಕದ ಸರ್ವೋಚ್ಚ ನ್ಯಾಯಾಲಯ ಪ್ರಚುರಪಡಿಸಿರುವ ನಿಲುವು. ಅಮೆರಿಕದ ಎಲ್ಲ ರಾಜ್ಯಗಳಲ್ಲೂ ಸ್ವಾತಂತ್ರ್ಯವಾದಿ ಸಂಘಟನೆಗಳಿಂದ ಈ ತೀರ್ಪಿನ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿವೆ.

ಹಾಗೆ ನೋಡಿದರೆ ಈ ತೀರ್ಪು ನನ್ನನ್ನು ಇಷ್ಟೆಲ್ಲ ವಿಚಲಿತಗೊಳಿಸಬಾರದು. ನಾನು ವಾಸವಾಗಿರುವುದು ನ್ಯೂಜೆರ್ಸಿ ರಾಜ್ಯದಲ್ಲಿ. ಡೆಮಾಕ್ರಟಿಕ್ ಪಕ್ಷ ಆಡಳಿತದಲ್ಲಿರುವ ಈ ರಾಜ್ಯದಲ್ಲಿ ಸುಪ್ರೀಂ ಕೋರ್ಟಿನ ಈ ತೀರ್ಪಿನಿಂದ ಗರ್ಭಪಾತ ಕಾಯಿದೆಗಳಲ್ಲಿ ಏನೂ ಬದಲಾವಣೆಯಾಗಿಲ್ಲ. ಹಾಗೊಂದು ವೇಳೆ ಮುಂಬರುವ ಚುನಾವಣೆಗಳಲ್ಲಿ ಈ ರಾಜ್ಯದಲ್ಲೂ ರಿಪಬ್ಲಿಕನ್ ಪಕ್ಷ ಆಡಳಿತಕ್ಕೆ ಬಂದು, ಅವರು ಕಾಯಿದೆಗಳಲ್ಲಿ ಬದಲಾವಣೆ ತಂದು, ಅದೇ ವೇಳೆಗೆ ಗರ್ಭ ನಿಯಂತ್ರಣ ಮುಂಜಾಗರೂಕತೆಗಳೆಲ್ಲ ನಿಷ್ಫಲವಾಗಿ ನಾನು ಮಗು ಹೆರಲೇಬೇಕಾಗಿ ಬಂದರೂ, ವಿವಾಹದ ಮೊಹರೊತ್ತಿಕೊಂಡು ಕುಟುಂಬ ವ್ಯವಸ್ಥೆಯ ಆರೈಕೆಯಲ್ಲಿರುವ ನನಗೆ ಪ್ಲಾನ್ ಮಾಡದ ಮಗು ಹೆಚ್ಚೆಂದರೆ ಒಂದು ಅಡಚಣೆಯಾದೀತು. ಅದು ನನಗೆ ಜೀವನ್ಮರಣದ ಪ್ರಶ್ನೆಯಲ್ಲ. ಆದರೆ ಇದು ಎಲ್ಲ ಹೆಣ್ಣುಮಕ್ಕಳ ಪಾಡಲ್ಲ.

ಉದಾಹರಣೆಗೆ ಈಕೆಯನ್ನು ತೆಗೆದುಕೊಳ್ಳೋಣ. ಇವಳು ಮಿಸಿಸ್ಸಿಪ್ಪಿ ರಾಜ್ಯದ ಹೊಟೇಲೊಂದರಲ್ಲಿ ವೇಟ್ರೆಸ್ ಆಗಿ ಕೆಲಸ ಮಾಡುತ್ತಾಳೆ. ಅಲ್ಲಿಯೇ ಅವಳಿಗೊಬ್ಬ ಬಾಯ್‌ಫ್ರೆಂಡ್ ಇದ್ದಾನೆ. ಅವಳ ಹೆಸರು ಟ್ರೇಸಿ ಅಂತಿಟ್ಟುಕೊಳ್ಳೋಣ. ಹುಟ್ಟಿದಾಗಲೇ ತಂದೆತಾಯಿಯರಿಂದ ತ್ಯಜಿಸಲ್ಪಟ್ಟು ಅನಾಥರನ್ನು ಪೋಷಿಸುವ ಫಾಸ್ಟರ್ ಕುಟುಂಬಗಳಲ್ಲಿ ಬೆಳೆದವಳು ಅವಳು. ಕೆಲಸದ ನಂತರ ಸಿಕ್ಕ ಸಮಯದಲ್ಲಿ ಸಂಜೆ ಕಾಲೇಜಿಗೆ ಹೋಗುತ್ತ ಓದನ್ನು ಮುಂದುವರೆಸುತ್ತಿದ್ದಾಳೆ. ಪೈಸೆ ಪೈಸೆ ಕೂಡಿಟ್ಟು ಉಜ್ವಲ ಭವಿಷ್ಯವೊಂದರ ಕನಸು ಕಾಣುತ್ತಿದ್ದಾಳೆ. ಹೀಗಿರುವಾಗಲೇ ತಾನು ಗರ್ಭ ಧರಿಸಿರುವುದು ಆಕೆಗೆ ಗೊತ್ತಾಗಿದೆ. ಮುಂದಿನ ವಾರ ಕ್ಲಿನಿಕ್ ಒಂದರಲ್ಲಿ ಸಮಯ ನಿಗದಿಪಡಿಸಿದ್ದಾಳೆ.

ಕ್ಲಿನಿಕ್ಕಿನಿಂದ ಅವಳಿಗೆ ಕರೆ ಬರುತ್ತದೆ, 'ನಿನ್ನ ಅಪಾಯಿಂಟ್‌ಮೆಂಟನ್ನು ಕ್ಯಾನ್ಸಲ್ ಮಾಡಿದ್ದೇವೆ. ಅಬಾರ್ಷನ್ ಬೇಕಿದ್ದರೆ ಅದಿನ್ನೂ ಕಾನೂನುಬಾಹಿರವಾಗಿಲ್ಲದ ರಾಜ್ಯಕ್ಕೆ ಹೋಗಿ ನೆರವೇರಿಸಿಕೊಳ್ಳಬಹುದು' ಎನ್ನುತ್ತಾಳೆ ಕರೆ ಮಾಡಿದವಳು. ಹಾಗೆ ದೂರದ ರಾಜ್ಯವೊಂದಕ್ಕೆ ಏಕಾಏಕಿ ಪ್ರಯಾಣ ಕೈಗೊಳ್ಳುವಷ್ಟು ಸ್ಥಿತಿವಂತಳಲ್ಲ ಟ್ರೇಸಿ. ಜೊತೆಗೆ ಒಂದು ದಿನ ತಪ್ಪಿಸಿದರೂ ಅವಳು ಕೆಲಸ ಕಳೆದುಕೊಳ್ಳುವ ಅಪಾಯವಿದೆ. ಎಷ್ಟೇ ಪರಸ್ಪರ ಪ್ರೇಮವಿದ್ದರೂ ಬದುಕಿನ ಈ ಹಂತದಲ್ಲಿ ಮಗುವೊಂದನ್ನು ಸ್ವಾಗತಿಸುವ ಸ್ಥಿತಿಯಲ್ಲಿಲ್ಲ ಈಕೆಯೂ, ಈಕೆಯ ಗೆಳೆಯನೂ. ಆದರೂ ಈ ಸಂಬಂಧದಲ್ಲಿ ಆತ ಮಾತ್ರ ಈ ಎಲ್ಲದರಿಂದ ಒಂದೇ ಹೆಜ್ಜೆ ಹೊರಕ್ಕಿಟ್ಟು ಎದ್ದು ನಡೆದುಬಿಡಬಹುದು. ಆಕೆಗೆ ಹಾಗೆ ಮಾಡಲು ಸಾಧ್ಯವಿಲ್ಲ. ಕಾರಣ, ಅವಳ ಮತ್ತು ಅವಳ ಗರ್ಭದ ನಡುವೆ ಪ್ರಭುತ್ವ ಹಾಕಿರುವ ಬೇಲಿ.

## ಗರ್ಭಪಾತದ ಸುತ್ತ ಸಂಕಟಗಳು

ಗರ್ಭಪಾತಕ್ಕೆ ಯಾರೂ ಬೇಕಂತ ಮೈಯೊಡ್ಡಿಕೊಳ್ಳುವುದಿಲ್ಲ. ಬೇರೆ ಯಾವುದೂ ದಾರಿ ಫಲಕಾರಿಯಾಗದೇ ಇದ್ದಾಗ ಮಾತ್ರ ಹೆಣ್ಣುಮಕ್ಕಳು ಈ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. 'ಹತ್ತು ಹಡೆಯೋದಾದ್ರೂ ಬೇಕಮ್ಮ, ಹೀಗೆ ಅರ್ಧ ಮಗೂನ ಹಡೆಯೋ ನರಳಾಟ ಯಾರಿಗೂ ಬೇಡ' ಅಂತ ಹಿರಿಯ ಮಹಿಳೆಯೊಬ್ಬರು ಅವಲತ್ತುಕೊಂಡಿದ್ದನ್ನು ಕೇಳಿದ್ದೇನೆ. ಆ ಮಗುವನ್ನು ಜಗತ್ತಿಗೆ ತರಬಹುದು ಎಂಬ ಒಂದೇ ಒಂದು ಸಣ್ಣ ಆಯ್ಕೆಯ ಅಭಯ ಸಿಕ್ಕರೂ ಆಕೆ ತಾಯ್ತನವನ್ನೇ ಆಯ್ದುಕೊಳ್ಳುತ್ತಾಳೋ ಏನೋ. ಹಾಗಿದ್ದೂ ಒಂದೇ ಒಂದು ಬಾರಿ ತಾಯ್ತನವನ್ನು ಅನುಭವಿಸಬೇಕೆಂದು ಸಿಕ್ಕೆಲ್ಲ ದೇವರುಗಳಿಗೆ ಹರಕೆ ಹೊತ್ತೋ, ಇಂಟ್ರಾ ಯುಟರೈನ್, ಇನ್‌ವಿಟ್ರಿಯೋ ಚಿಕಿತ್ಸೆಗಳ ಮೊರೆ ಹೋಗಿಯೋ ಮಗುವಿಗಾಗಿ ಮನಃಪೂರ್ತಿ ಹಂಬಲಿಸುವ ಗೆಳತಿಯರೂ ಇಲ್ಲೇ ಇದ್ದಾರೆ ನಮ್ಮ ನಡುವೆ.

ಆದರೆ ಮಗುವೊಂದನ್ನು ಲೋಕಕ್ಕೆ ತರುವುದು ಈ ವಿಘಟಿತ ಕಾಲದಲ್ಲಿ ಅಷ್ಟೊಂದು ಸರಳ